# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿಆರ್/ಇ-36259/23-24

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 18.7.23

**ಕಛೇರಿ ಆದೇಶ**

ವಿಷಯ: ಶ್ರೀ ಕೆ. ಸೈಯದ್ ಅತೀಖುರ್ ರೆಹಮಾನ್ ಇದ್ರೂಸ್, ಕಾರ್ಯಪಾಲಕ ಅಭಿಯಂತರರು ಇವರನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಲೋಕೋಪಯೋಗಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಲೋಇ 86 ಸೇಎಸು 2023, ದಿನಾಂಕ: 21-06-2023

2) ಸರ್ಕಾರದ ಉಪ ಕಾರ್ಯದರ್ಶಿ, (ಸೇವೆಗಳು) ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ರವರ ಅಧಿಸೂಚನೆ ಸಂಖ್ಯೆ: MID /17/SES/ 2023, ದಿನಾಂಕ: 03-07-2023

3) ಶ್ರೀ ಕೆ. ಸೈಯದ್ ಅತೀಖುರ್ ರೆಹಮಾನ್ ಇದ್ರೂಸ್, ಕಾರ್ಯಪಾಲಕ ಅಭಿಯಂತರರು ರವರ ಮನವಿ ದಿನಾಂಕ: 15-07-2023

4) ಸಂಖ್ಯೆ: ಬಿ12(6)ಪಿಆರ್/56/23-24, ದಿನಾಂಕ: 05-07-2023ರ ಸುತ್ತೋಲೆ

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಸೈಯದ್ ಅತೀಖುರ್ ರೆಹಮಾನ್ ಇದ್ರೂಸ್, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯಪಾಲಕ ಅಭಿಯಂತರರು (ಕೆ.ಆರ್.ಪುರ) ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಉಲ್ಲೇಖ-(1) ಮತ್ತು (2) ಅಧಿಸೂಚನೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಮಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಿರುವುದರಿಂದ, ಸದರಿಯವರನ್ನು ದಿ: 19-07-2023ರ ಅಪರಾಹ್ನದಿಂದ ಅನ್ವಯವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಿಂದ ಹಾಗೂ ಹಾಲಿ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳಿಂದ (Deemed Relieve) ಬಿಡುಗಡೆಗೊಳಿಸಿ ಆದೇಶಿಸಿದೆ.

**ಷರತ್ತುಗಳು:-**

1. ಸದರಿ ಅಭಿಯಂತರರು ನಗರ ಪಾಲಿಕೆಯ ಸೇವಾ ಅವಧಿಯಲ್ಲಿ ನಗರ ಪಾಲಿಕೆಗೆ ಯಾವುದೇ ಆರ್ಥಿಕ ಬಾಕಿಯನ್ನು ಉಳಿಸಿಕೊಂಡಿದ್ದಲ್ಲಿ ಸದರಿಯವರಿಂದ ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ.
2. ಸದರಿ ಅಭಿಯಂತರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ನಿಯಮಾನುಸಾರ ಕ್ರಮಜರುಗಿಸುವ ಷರತ್ತಿಗೊಳಪಡಿಸಿದೆ.
3. ಪಾಲಿಕೆಯ ಹಿಂದಿನ ವರ್ಷಗಳ ಆಡಿಟ್ ವರದಿಗಳಲ್ಲಿ ಯಾವುದೇ ಆರ್ಥಿಕ ಬಾಕಿಯನ್ನು ಸದರಿಯವರಿಂದ ವಸೂಲಾತಿ ಮಾಡಲು ಸೂಚಿಸಿದಲ್ಲಿ, ಅಂತಹ ಮೊತ್ತವನ್ನು ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ಅವುಗಳಿಗೆ ಸಮರ್ಪಕ ಉತ್ತರ ನೀಡುವ ಷರತ್ತು ವಿಧಿಸಿದೆ.
4. ಸದರಿಅಭಿಯಂತರರು ನಗರ ಪಾಲಿಕೆಯ ವಸತಿಗೃಹದಲ್ಲಿ ವಾಸಿಸುತ್ತಿದ್ದಲ್ಲಿ ಕೂಡಲೇ ತೆರವುಗೊಳಿಸುವ ಷರತ್ತಿಗೊಳಪಡಿಸಿದೆ.
5. ವಾಕಿ ಟಾಕಿ, ಮೊಬೈಲ್ ಫೋನ್, ಸಿಮ್‌ಕಾರ್ಡ್, ಹೆಲ್ಮ್ಕಾರ್ಡ್, ಗುರುತಿನ ಚೀಟಿ (Identity card) ಹಾಗೂ ಲ್ಯಾಪ್ ಟಾಪ್‌ಗಳನ್ನು ಪಾಲಿಕೆಯಿಂದ ಪಡೆದಿದ್ದಲ್ಲಿ ಇವುಗಳನ್ನು ಪಾಲಿಕೆಗೆ ಹಿಂದಿರುಗಿಸುವ ಷರತ್ತಿಗೊಳಪಡಿಸಿದೆ.

ಮೇಲ್ಕಂಡ ಆದೇಶದನ್ವಯ ಹಾಗೂ ಮಾನ್ಯ ಮುಖ್ಯ ಆಯುಕ್ತರು ರವರ ಉಲ್ಲೇಖ-(4)ರ ಸುತ್ತೋಲೆಯನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವುದು.

FDC 19/07/23

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದ ಮೇರೆಗೆ)

18/7

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

18/7/2023 18/7/23

ಪ್ರತಿಯನ್ನು :
: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ

ಉಪ ಮುಖ್ಯ ಮಾಹಿತಿ ಅಧಿಕಾರಿ (ಮಾಹಿತಿ ತಂತ್ರಜ್ಞಾನ) ರವರ ಕಛೇರಿ
ಸಂಖ್ಯೆ: .......... 
ದಿನಾಂಕ: 19/7/2023
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ಚೌಕ, ಬೆಂಗಳೂರು

: ಮಾನ್ಯ ವಿಶೇಷ ಆಯುಕ್ತರು (ಯೋಜನೆ) / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಕಳುಹಿಸಿದೆ
: ಸರ್ಕಾರದ ಅಧೀನ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ರವರಿಗೆ ಕಳುಹಿಸಿದೆ.
: ಜಂಟಿ ಆಯುಕ್ತರು (ಮಹದೇವಪುರ) ವಲಯ / ಮುಖ್ಯ ಅಭಿಯಂತರರು (ಮಹದೇವಪುರ) ವಲಯ ರವರಿಗೆ ಕಳುಹಿಸಿದೆ.
: ನಿರ್ದೇಶಕರು, ಮಾಹಿತಿ ತಂತ್ರಜ್ಞಾನ / ಉಪ ಮುಖ್ಯ ಮಾಹಿತಿ ಅಧಿಕಾರಿ, ಬಿ.ಬಿ.ಎಂ.ಪಿ ರವರಿಗೆ ಕಳುಹಿಸುತ್ತಾ, ಸದರಿಯವರು ಮೊಬೈಲ್ ಪೋನ್, ಮತ್ತು ಸಿಮ್‌ಕಾರ್ಡ್ ಅನ್ನು ಪಾಲಿಕೆಗೆ ಹಿಂದಿರುಗಿಸಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.
: ಕಾರ್ಯಪಾಲಕ ಅಭಿಯಂತರರು (ಕೆ.ಆರ್.ಪುರ) ವಿಭಾಗ ರವರಿಗೆ ಕಳುಹಿಸಿದೆ.
: ಮು.ಲೆ.ಅ / ಮು.ಲೆ.ಪ ರವರಿಗೆ ರವರಿಗೆ /ಉ.ನಿ (ಹಣಕಾಸು-ಮಹದೇವಪುರ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ / ಕಛೇರಿ ಪ್ರತಿ.